ಹೆಸರಿನಲ್ಲಿ ಒಂದು ಹೆರಿಗೆ ಆಸ್ಪತ್ರೆ ಇದೆ. ಉಳಿದ ಪ್ರದೇಶ ಖಾಲಿ ಬಿದ್ದಿದ್ದು ಸ್ಥಳೀಯ ಜನತೆ ಈ ಪ್ರದೇಶದಲ್ಲಿ ಒಂದು ಜನರಲ್ ಆಸ್ಪತ್ರೆ ಕಟ್ಟಲು ಹಲವಾರು ಬಾರಿ ಮನವಿ ಸಲ್ಲಿಸುವ ಮೂಲಕ ಒತ್ತಾಯಿಸುತ್ತಾ ಬಂದಿದ್ದಾರೆ. ಆದರೆ ಇಲಾಖೆ ಈವರೆಗೆ ಯಾವುದೇ ಕ್ರಮವನ್ನು ಕೈಗೊಂಡಿಲ್ಲ. ಮೈಸೂರು ನಗರದ ಪ್ರಸಕ್ತ ಜನಸಾಂದ್ರತೆಯ ದೃಷ್ಟಿಯಿಂದ ಮತ್ತು ಮೈಸೂರಿನ ಪಶ್ಚಿಮ ಭಾಗದ ಜನತೆಯ ದೃಷ್ಟಿಯಿಂದ ಅವಶ್ಯಕವಾಗಿ ಇಲ್ಲಿ ಒಂದು ಜನರಲ್ ಆಸ್ಪತ್ರೆಯು ಅತ್ಯಾವಶ್ಯಕ. ಆದ್ದರಿಂದ ಈ ಜನರಲ್ ಆಸ್ಪತ್ರೆಯನ್ನು ಕಟ್ಟುವಲ್ಲಿ ತುರ್ತಾಗಿ ಕಾರ್ಯೋನ್ಮುಖರಾಗುವ ಮೂಲಕ ಸ್ಥಳೀಯ ಜನತೆಯ ಬಹಳ ದಿನಗಳ ಬೇಡಿಕೆಯನ್ನು ಕಾರ್ಯಗತಗೊಳಿಸಬೇಕೆಂದು ಈ ಮೂಲಕ ಒತ್ತಾಯ ಪೂರ್ವಕವಾಗಿ ಕೋರುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೌಜ (ಆರೋಗ್ಯ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ಮೈಸೂರು ನಗರವು ಮಹಾನಗರ ಪಾಲಿಕೆಯ ಆಡಳಿತ ವ್ಯಾಪ್ತಿಗೊಳಪಟ್ಟಿರುತ್ತದೆ. ನಗರ ಪಾಲಿಕೆಯ ಆಡಳಿತ ವ್ಯಾಪ್ತಿಯಲ್ಲಿ ಆರೋಗ್ಯ ಸೌಲಭ್ಯಗಳನ್ನು ಒದಗಿಸುವ ಮತ್ತು ಸೌಲಭ್ಯಗಳನ್ನು ಉತ್ತಮ ಪಡಿಸುವ ವಿಚಾರ ನಗರ ಪಾಲಿಕೆಯ ಮುಖ್ಯ ಕಾರ್ಯಕ್ರಮದಲ್ಲಿ ಬಂದಾಗಿರುತ್ತದೆ, ನೂತನ ಆಸ್ಪತ್ರೆಗಳನ್ನು ನಗರಪಾಲಿಕೆಯ ಸೀಮೆಯಲ್ಲಿ ಮಂಜೂರು ಮಾಡುವುದು ಸರ್ಕಾರಕ್ಕೆ ಹೆಚ್ಚಿನ ಹೊಣೆಯಾಗುತ್ತದೆ. ಈ ಕಾರಣದಿಂದ ಈ ಆಸ್ಪತ್ರೆಯನ್ನು ನಗರ ಪಾಲಿಕೆಯವರು ಹೆಚ್ಚಿನ ಆಸಕ್ತಿ ವಹಿಸಿ, ಅಭಿವೃದ್ಧಿ ಪಡಿಸಬೇಕಾಗುತ್ತದೆ. ಮತ್ತು ಜನರಲ್ ಆಸ್ಪತ್ರೆಗೆ ಬೇಕಾಗುವ ಕಟ್ಟಡವನ್ನು ವಿನ್ಯಾಸದಂತೆ ಸಿದ್ಧಪಡಿಸಿ, ನಗರ ಪಾಲಿಕೆಯ ವೆಚ್ಚದಲ್ಲಿಯೇ ಕಟ್ಟಿಸಿಕೊಡಬೇಕಾಗುತ್ತದೆ. 30 ಹಾಸಿಗೆಗಳ ಕಟ್ಟಡವು ಅಂದಾಜು ವೆಚ್ಚ ಪ್ರಸಕ್ತ ಸಾಲಿನ ದರದಂತೆ ಸುಮಾರು 48.00 ಲಕ್ಷ ರೂಪಾಯಿಗಳಾಗಬಹುದೆಂದು ಅಂದಾಜು ಮಾಡಲಾಗಿದೆ. ಕಟ್ಟಡವನ್ನು ನಗರಪಾಲಿಕೆಯವರು ಕಟ್ಟಿಸಿಕೊಂಡು ಮುಂದೆ ಬಂದಲ್ಲಿ ಮನವಿಯನ್ನು ಪರಿಶೀಲಿಸಲಾಗುವುದು.

(2) ಹಾಸನ ಕ್ಷೇತ್ರದ ಶಾಂತಿಗ್ರಾಮದಲ್ಲಿ ಸರ್ಕಾರಿ ಆಸ್ಪತ್ರೆಗೆ ಹೆರಿಗೆ ವಾರ್ಡ್.

ಶ್ರೀ ಕೆ. ಹೆಚ್. ಹನುಮೇಗೌಡ:– ಮಾನ್ಯ ಅಧ್ಯಕ್ಷರೆ, ಹಾಸನ ವಿಧಾನ ಸಭಾ ಕ್ಷೇತ್ರದ ಶಾಂತಿಗ್ರಾಮದಲ್ಲಿ ಒಂದು ಸರ್ಕಾರಿ ಆಸ್ಪತ್ರೆ ಕಳೆದ 30 ವರ್ಷಗಳಿಂದ ಇದೆ. ಈ ಆಸ್ಪತ್ರೆಗೆ ಪ್ರತಿ ನಿತ್ಯ ನೂರಾರು ರೋಗಿಗಳು ಬರುತ್ತಿದ್ದಾರೆ. ಶಾಂತಿಗ್ರಾಮ ಮತ್ತು ಸುತ್ತಮುತ್ತಲ 25ಕ್ಕೂ ಮೇಲ್ಪಟ್ಟ ಗ್ರಾಮಗಳ ಜನರು ಇದೇ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬರುತ್ತಿದ್ದಾರೆ. ಈ ಆಸ್ಪತ್ರೆಯಲ್ಲಿ ಹೆರಿಗೆ ವಾರ್ಡ್ ಇರುವುದಿಲ್ಲ. ಶಾಂತಿ ಗ್ರಾಮ ಮತ್ತು ಸುತ್ತಮುತ್ತಲ 25 ಗ್ರಾಮಗಳ ಗರ್ಭಿಣಿ ಹೆಂಗಸರಿಗೆ ತೊಂದರೆ ಆದರೆ 14 ಕಿ.ಮೀ. ದೂರದಲ್ಲಿರುವ ಹಾಸನ ಪಟ್ಟಣದ ಜನರಲ್ ಆಸ್ಪತ್ರೆಗೆ ಅಥವಾ 24 ಕಿ.ಮೀ. ದೂರದಲ್ಲಿರುವ ಚನ್ನರಾಯನಪಟ್ಟಣದ ಜನರಲ್ ಆಸ್ಪತ್ರೆಗೆ ಹೋಗಬೇಕಾಗುತ್ತದೆ. ಅನೇಕ ಸಂದರ್ಭಗಳಲ್ಲಿ ಸಕಾಲದಲ್ಲಿ ಹೆಂಗಸರು ಹೆರಿಗೆಗೆ ಹೋಗಲಾದರೆ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಈ ವಿಚಾರವನ್ನು ಮನಗಂಡು ಶಾಂತಿಗ್ರಾಮದ ಸರ್ಕಾರಿ ಆಸ್ಪತ್ರೆಗೆ ಒಂದು ಹೆರಿಗೆ ವಾರ್ಡನ್ನು ಮಂಜೂರು ಮಾಡುವಂತೆ ಸರ್ಕಾರವನ್ನು ಸ್ಥಳೀಯ ಜನರು ಕಳೆದ 10–15 ವರ್ಷಗಳಿಂದ ಒತ್ತಾಯಿಸುತ್ತಾ ಬಂದಿದ್ದಾರೆ. ಈ ತೊಂದರೆಯನ್ನು ಮನಗಂಡು ಹಾಸನ ಜಿಲ್ಲಾ ಪರಿಷತ್ತಿನವರು ಶಾಂತಿಗ್ರಾಮದ ಸರ್ಕಾರಿ ಆಸ್ಪತ್ರೆಗೆ ಬಂದು ಹೆರಿಗೆ ವಾರ್ಡನ್ನು ಮಂಜೂರು ಮಾಡಿಕೊಡುವಂತೆ ಸರ್ಕಾರಕ್ಕೆ ಮನವಿಯನ್ನು ಕೂಡ ಸಲ್ಲಿಸಿರುತ್ತಾರೆ. ಶಾಂತಿ ಗ್ರಾಮದ ಸರ್ಕಾರಿ ಆಸ್ಪತ್ರೆಗೆ ಒಂದ ಹೆರಿಗೆ ವಾರ್ಡನ್ನು ಮಂಜೂರು ಮಾಡಿಕೊಡಬೇಕೆಂದು ಸ್ಥಳೀಯ ಜನರ ಪರವಾಗಿ ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯಿಸುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೌಜ (ಮುಖ್ಯಮಂತ್ರಿಗಳ ಪರವಾಗಿ):– ಮಾನ್ಯ ಶ್ರೀ ಕೆ.ಹೆಚ್.

ಹನುಮೇಗೌಡರು ಶಾಸಕರು, ದಿನಾಂಕ: 23.11.92 ರಂದು ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಪತ್ರವನ್ನು ಬರೆದು ಹಾಸನ ಜಿಲ್ಲೆಯ ಶಾಂತಿಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಒಂದು ಹೆರಿಗೆ ವಾರ್ಡನ್ನು ಮಂಜೂರು ಮಾಡಬೇಕೆಂದು ವಿನಂತಿಸಿಕೊಂಡಿರುತ್ತಾರೆ. ಈ ಬಗ್ಗೆ ಸ್ಥಳೀಯರು ಒಂದು ಲಕ್ಷ ರೂಪಾಯಿಗಳ ವಂತಿಗೆ ಹಣವನ್ನು ಕೊಡಲು ಸಿದ್ದರಿರುವರು ಹಾಗೂ ಕಟ್ಟಡದ ವೆಚ್ಚದ ಉಳಿದ ಭಾಗವನ್ನು ಭರಿಸಲು ಜಿಲ್ಲಾ ಪರಿಷತ್ತು ಆಯವ್ಯಯದಲ್ಲಿ ಅವಕಾಶವಿದೆಯೋ ಎಂಬುದನ್ನು ಪರಿಶೀಲಿಸಿ ಜಿಲ್ಲಾ ಪರಿಷತ್ತಿನ ಅನುಮೋದನೆಯೊಂದಿಗೆ ಪ್ರಸ್ತಾವನೆಯನ್ನು ಕಳುಹಿಸಲು ಜಿಲ್ಲಾ ಮಟ್ಟದ ಅಧಿಕಾರಿಗಳ ಜೊತೆ ಪತ್ರ ವ್ಯವಹಾರ ನಡೆದಿದೆ. ಮಾನ್ಯ ಶಾಸಕರು ಕೇಳಿರುವ ಹಾಗೆ ಸ್ಥಳೀಯರಿಂದ ಒಂದು ಲಕ್ಷ ರೂಪಾಯಿಯ ವಂತಿಗೆ ದೊರೆಯುವುದಾದರೆ ಮತ್ತು ಜಿಲ್ಲಾ ಪರಿಷತ್ತಿನಲ್ಲಿ ಕಟ್ಟಡಕ್ಕೆ ಬೇಕಾಗುವ ಅಂದಾಜಿನ ಉಳಿದ ಮೊತ್ತವನ್ನು 1993-94ನೇ ಸಾಲಿನಲ್ಲಿ ಒದಗಿಸಿದ್ದಲ್ಲಿ 10 ಹಾಸಿಗೆಯುಳ್ಳ ಹೆರಿಗೆ ವಾರ್ಡನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದು. ಹಾಗೂ ಈ ವಿಭಾಗಕ್ಕೆ ಬೇಕಾಗಿರುವ ಸಿಬ್ಬಂದಿಯನ್ನು ಮತ್ತು ಇತರ ಅಗತ್ಯ ಉಪಕರಣಗಳನ್ನು ಕಟ್ಟಡ ಪೂರ್ಣಗೊಳ್ಳುವ ಸಮಯಕ್ಕೆ ಒದಗಿಸಲಾಗುವುದು.

(3) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜೇನು ಕೃಷಿ

ಶ್ರೀ ಬಿ. ಎಂ. ಇದಿನಬ್ಬ:– ಮಾನ್ಯ ಧ್ಯಕ್ಷರೆ, ರಾಜ್ಯದಲ್ಲಿ ಜೇನುಕೃಷಿಯ ಭವಿಷ್ಯ ಚೆನ್ನಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಕೂಡ ಜೇನು ಕೃಷಿ ವಿಪುಲವಾಗಿದೆ. ಆದರೆ ಈಗ ಜೇನು ಕೃಷಿಗೆ ಅಪಾರ ಹಾನಿಯಾಗಿರುತ್ತದೆ. ಜೇನುನೊಣಗಳ ಮಾರಕ ರೋಗದಿಂದಾಗಿ ನೊಣಗಳು ಸಾಯುತ್ತಿವೆ. ಜೇನುನೊಣಗಳ ರೋಗ ನಿವಾರಣೆ ಜರೂರಿನ ವಿಷಯವಾಗಿರುತ್ತದೆ. ಈ ಕುರಿತು ಸರ್ಕಾರದ ಇಲಾಖೆ ಕಾರ್ಯಕ್ರಮ ತೆಗೆದುಕೊಳ್ಳುವುದು ಅತಿ ಪ್ರಾಮುಖ್ಯ. ಈ ಬಗ್ಗೆ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳಲಾಗಿದೆಯೇ ? ಕೇಂದ್ರ ಸರ್ಕಾರದ ಇತರೆ ರಾಜ್ಯಗಳಿಗೆ ಜೇನು ಕೃಷಿಗೆ ಹೆಚ್ಚಾಗಿ ನೆರವು ನೀಡಿರುತ್ತದೆ. ಆ ಪ್ರಕಾರ ಕರ್ನಾಟಕವೂ ಕನಿಷ್ಠ 5 ಕೋಟಿ ರೂಪಾಯಿಗಳ ನೆರವು ಕೇಳುವುದೇ ? ಈ ಕುರಿತು ಸಣ್ಣ ಕೈಗಾರಿಕಾ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಸಿ. ಆರ್. ಸಗೀರ್ ಅಹಮ್ಮದ್ (ಸಣ್ಣ ಕೈಗಾರಿಕ ಮಂತ್ರಿಗಳು):– ಮಾನ್ಯ ಅಧ್ಯಕ್ಷರೆ, ರಾಜ್ಯದ ಮಲೆನಾಡು ಜಿಲ್ಲೆಯಲ್ಲಿ ಜೇನು ಕೃಷಿಗೆ ಒಳ್ಳೆಯ ಭವಿಷ್ಯ ಇದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೂಡ ಜೇನು ಕೃಷಿ ಅಭಿವೃದ್ಧಿಗೆ ಸಾಕಷ್ಟು ಅವಕಾಶವಿದೆ. ಆದರೆ 1992ರ ಪ್ರಾರಂಭದಿಂದ ಜೇನು ಕುಟುಂಬ ಸಂಸಾರಕ್ಕೆ ತಾಯ್ ಸ್ಯಾಕ್ ಬ್ರೂಡ್ ಎಂಬ ವೈರಸ್ ಕಾಯಿಲೆ ಪ್ರಾರಂಭವಾಗಿ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕೊಡಗು ಜಿಲ್ಲೆಗಳಲ್ಲಿ ಜೇನು ಕುಟುಂಬಕ್ಕೆ ತುಂಬ ಹಾನಿಯಾಗಿದೆ. ಇದರಿಂದ ಜೇನು ಕೃಷಿಯನ್ನು ಅವಲಂಬಿಸಿರುವ ರೈತರಿಗೆ ಅಪಾರ ನಷ್ಟ ಉಂಟಾಗಿದೆ. ಈ ವೈರಸ್ ಕಾಯಿಲೆಗೆ ಔಷಧಿ ಇಲ್ಲದಿರುವುದರಿಂದ ವೈರಸ್ ಕಾಯಿಲೆಯನ್ನು ಗುಣಪಡಿಸಲು ಸಾಧ್ಯವಾಗಿರುವುದಿಲ್ಲ. ಈ ಕಾಯಿಲೆ ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳಿಗೂ ಹರಡುತ್ತಿದೆ. ಆದಾಗ್ಯೂ ಈ ಕಾಯಿಲೆ ಹರಡುವಿಕೆಯನ್ನು ನಿಯಂತ್ರಿಸಲು ಮತ್ತು ಕಾಯಿಲೆಯಿಂದ ನಷ್ಟಕ್ಕೆ ಒಳಪಟ್ಟ ಜೇನು ಕೃಷಿಕರಿಗೆ ಪರಿಹಾರ ನೀಡಲು ಸರ್ಕಾರದಿಂದ ಈಗಾಗಲೇ ರೂ. 3.00 ಲಕ್ಷಗಳನ್ನು ಮಂಜೂರು ಮಾಡಲಾಗಿದೆ. ಮತ್ತು 3.00 ಲಕ್ಷ ರೂ.ಗಳನ್ನು ಕೊಡುವುದಕ್ಕೆ ಏರ್ಪಾಡು ಮಾಡಲಾಗಿದೆ. ಈ ಕಾಯಿಲೆ ಹರಡುವುದನ್ನು ತಡೆಗಟ್ಟುವುದಕ್ಕೆ ಹಾಗೂ ಜೇನು ಕೃಷಿಯನ್ನು ಪುನರ್ಜೀವನಗೊಳಿಸಲು ರಾಜ್ಯ ಮಟ್ಟದ ಜೇನು ಕುಟುಂಬ ಕಾಯಿಲೆ ನಿಯಂತ್ರಣ ಸಮಿತಿಯನ್ನು ರಚಿಸಲಾಗಿದೆ. ಈ ಕಾಯಿಲೆ ನಿಯಂತ್ರಣ ಕೇಂದ್ರವನ್ನು ಜರೂರಾಗಿ ಸ್ಥಾಪಿಸಲಾಗುತ್ತಿದೆ. ಆಫ್ರಿಕನ್ ಮತ್ತು ಇಟಾಲಿಯನ್, ಜೇನು ನೊಣಗಳನ್ನು ಉತ್ಪಾದನೆಯಲ್ಲಿ ತಂದು ಸಾಕಿರುವಂತೆ ಇದನ್ನು ರಾಜ್ಯದಲ್ಲಿಯೂ ತಂದು ಸಾಕುವ ಬಗ್ಗೆ